ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ

ಸಿ.ಸಿ ನಂ-594/2015

ಚಾಸಾ-4 ಪ್ರಾಸಾ-4

| | |
|---|---|
| ಹೆಸರು | ಸೋಮಲಿಂಗ ಲಕ್ಷ್ಮಪ್ಪ ನಾಯ್ಕರ |
| ತಂದೆಯ ಹೆಸರು | ಲಕ್ಷ್ಮಪ್ಪ ನಾಯ್ಕರ |
| ವಯಸ್ಸು | 65 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸ ಸ್ಥಳ | ಲಕ್ಷಾನಟ್ಟಿ , ಮುಧೋಳ |

**ದಿನಾಂಕಃ 28-06-2023 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಃ- ಶ್ರಿ. ಎಮ್.ಬಿ.ಎಚ್. ಪಿರ್ಯಾದುದಾರರ ಪರ ವಕೀಲರು ಃ**

ಈ ಪ್ರಕರಣದ ಆರೋಪಿತರ ಮತ್ತು ಪಿರ್ಯಾದುದಾರರ ಪರಿಚಯ ಇರುತ್ತದೆ.

ರಿ.ಸ.ನಂ. 163/1 ಬಿ ಜಮೀನಿನಲ್ಲಿದ್ದ ಬೋರವೆಲ ನೀರಿನ್ನು ಉಪಯೋಗಿಸಿಕೊಳ್ಳಲು ಆರೋಪಿತರಿಗೆ ಮತ್ತು ಪಿರ್ಯಾದುದಾರರಿಗೆ ಹಕ್ಕು ಇರುತ್ತದೆ. ದಿ: 10-01-2010 ರಂದು ಮಧ್ಯಾಹ್ನ 12 ಗಂಟೆ ಸುಮಾರಿಗೆ ನಾನು ದಾರಿ ಹಿಡಿದು ಹೊರಟಿದ್ದಾಗ ಆರೋಪಿತರಿಗೂ ಮತ್ತು ಪಿರ್ಯಾದುದಾರರಿಗೂ ರಿ.ಸ.ನಂ. 163/1 ಬಿ ಜಮೀನಿನಲ್ಲಿದ್ದ ಬೋರವೆಲ ನೀರಿನ ವಿಷಯಕ್ಕೆ ಜಗಳವಾಗುತ್ತಿದ್ದು, ಜಗಳದ ಬಾಯಿ ಸಪ್ಪಳ ಕೇಳಿ ಅಲ್ಲಿಗೆ ನಾನು ಹೋಗಿ ಆರೋಪಿತರಿಗೂ ಮತ್ತು ಪಿರ್ಯಾದುದಾರರಿಗೂ ಬುದ್ದಿ ಮಾತು ಹೇಳಿ ಜಗಳ ಬಿಡಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ :**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ನ್ಯಾಯಾಧೀಶರು ವ ಜೆಎಂಎಫ್‌ಸಿ
ಮುಧೋಳ.

ಸಾಕ್ಷಿಯ ಸಹಿ

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ

ಸಿ.ಸಿ ನಂ-594/2015

ಚಾಸಾ-3 ಪ್ರಾಸಾ-3

| | |
|---|---|
| ಹೆಸರು | ರಂಗಪ್ಪ ಗೋವಿಂದಪ್ಪ ನ್ಯಾಮಗೌಡ |
| ತಂದೆಯ ಹೆಸರು | ಗೋವಿಂದಪ್ಪ ನ್ಯಾಮಗೌಡ |
| ವಯಸ್ಸು | 65 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸ ಸ್ಥಳ | ಲಕ್ಷಾನಟ್ಟಿ , ಮುಧೋಳ |

**ದಿನಾಂಕಃ 28-06-2023 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಃ- ಶ್ರಿ. ಎಮ್.ಬಿ.ಎಚ್. ಪಿರ್ಯಾದುದಾರರ ಪರ ವಕೀಲರು ಃ**

ಈ ಪ್ರಕರಣದ ಆರೋಪಿತರ ಮತ್ತು ಪಿರ್ಯಾದುದಾರರ ಪರಿಚಯ ಇರುತ್ತದೆ.

ದಿ: 10-01-2010 ರಂದು ಮಧ್ಯಾಹ್ನ 12 ಗಂಟೆ ಸುಮಾರಿಗೆ ನಾನು ದಾರಿ ಹಿಡಿದು ಹೊರಟಿದ್ದಾಗ ಆರೋಪಿತರಿಗೂ ಮತ್ತು ಪಿರ್ಯಾದುದಾರರಿಗೂ ರಿ.ಸ.ನಂ. 163/1 ಬಿ ಜಮೀನಿನಲ್ಲಿದ್ದ ಬೋರವೆಲ ನೀರಿನ ವಿಷಯಕ್ಕೆ ಜಗಳವಾಗುತ್ತಿದ್ದು, ಜಗಳದ ಬಾಯಿ ಸಪ್ಪಳ ಕೇಳಿ ಅಲ್ಲಿಗೆ ನಾನು ಹೋಗಿ ಆರೋಪಿತರಿಗೂ ಮತ್ತು ಪಿರ್ಯಾದುದಾರರಿಗೂ ಬುದ್ದಿ ಮಾತು ಹೇಳಿ ಜಗಳ ಬಿಡಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ :**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ನ್ಯಾಯಾಧೀಶರು ವ ಜೆಎಂಎಫ್‌ಸಿ
ಮುಧೋಳ.

ಸಾಕ್ಷಿಯ ಸಹಿ

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ

ಸಿ.ಸಿ ನಂ-594/2015

ಚಾಸಾ-2 ಫ್ರಾಸಾ-2

| | |
|---|---|
| ಹೆಸರು | ಶ್ರೀನಿವಾಸ ಅರ್ಜುನ ಹಲಕಿ |
| ತಂದೆಯ ಹೆಸರು | ಅರ್ಜುನ ಹಲಕಿ |
| ವಯಸ್ಸು | 30 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸ ಸ್ಥಳ | ಲಕ್ಷಾನಟ್ಟಿ , ಮುಧೋಳ |

**ದಿನಾಂಕಃ 28-06-2023 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಃ- ಶ್ರಿ. ಎಮ್.ಬಿ.ಎಚ್. ಪಿರ್ಯಾದುದಾರರ ಪರ ವಕೀಲರು ಃ**

ಈ ಪ್ರಕರಣವನ್ನು ಅರ್ಜುನ ಹಲಕಿ ನನಗೆ ತಂದೆಯಾಗಬೇಕು. ಅಜ್ಜಪ್ಪ ಬಸಪ್ಪ ಹಲಕಿ, ಲಕ್ಷ್ಮಪ್ಪ ಹನಮಪ್ಪ ಹಲಕಿ, ರವಿ ಲಕ್ಷ್ಮಪ್ಪ ಹಲಕಿ, ಮಂಜುನಾಥ ಲಕ್ಷ್ಮಪ್ಪ ಹಲಕಿ ಹಾಗೂ ಹನಮಪ್ಪ ಬಸಪ್ಪ ಹಲಕಿ ಇವರ ಮೇಲೆ ಈ ಪ್ರಕರಣವನ್ನು ನನ್ನ ತಂದೆಯವರು ಹೂಡಿರುತ್ತಾರೆ.

ಆರೋಪಿ ನಂ.೨ ಮತ್ತು ೪ ಆರೋಪಿ ನಂ. ೧ ರ ಮಕ್ಕಳು. ಆರೋಪಿ ನಂ.೫ ಮತ್ತು ೬ ಮೃತ ಆರೋಪಿ ನಂ. ೩ ರ ಮಕ್ಕಳು. ಆರೋಪಿ ನಂ. ೧ ಮತ್ತು ೩ ನನ್ನ ಕಾಕಂದಿರು.

ಅಪಸಾತ ವಾಟ್ನಿ ಪ್ರಕಾರ ಲೋಕಾಪೂರ ಗ್ರಾಮದ ರಿ.ಸ.ನಂ. 163/1 ಎ ಕ್ಷೇತ್ರ 2 ಎಕರೆ 29 ಗುಂಟೆ ಜಮೀನು ನ್ನನ ತಂದೆಯ ಭಾಗಕ್ಕೆ ಬಂದಿದ್ದು, ಅದೆ ರೀತಿ ಲೋಕಾಪೂರ ಗ್ರಾಮದ ರಿ.ಸ.ನಂ. 163/1 ಬಿ ಕ್ಷೇತ್ರ 3 ಎಕರೆ 2 ಗುಂಟೆ ಆರೋಪಿ ನಂ. ೧ ರ ವಾಟ್ನಿಗೆ ಬಂದಿದ್ದು, ಸದರಿ ಜಮೀನಿನಲ್ಲಿ ಬೋರವೆಲ ಇದ್ದು, ಅದನ್ನು ಇಬ್ಬರಿಗೂ ಸರಿ ಸಮಾನವಾಗಿ ಉಪಯೋಗಿಸಿಕೊಳ್ಳಲು ಹಕ್ಕು ಮತ್ತು ಬಾಧತ್ಯೆಗಳಿದ್ದವು.

ದಿ: 10-01-2010 ರಂದು ಮಧ್ಯಾಹ್ನ 12 ಗಂಟೆ ಸುಮಾರಿಗೆ ನಾನು ಮತ್ತು ನನ್ನ ತಂದೆ ರಿ.ಸ.ನಂ. ರಿ.ಸ.ನಂ. 163/1 ಬಿ ಕ್ಷೇತ್ರ 3 ಎಕರೆ 2 ಗುಂಟೆ ಜಮೀನಿನಲ್ಲಿದ್ದ ಬೋರವೆಲ ನ್ನು ಚಾಲು ಮಾಡಲು ಹೋದಾಗ ಆರೋಪಿತರೇಲ್ಲರೂ ಕೈಯಲ್ಲಿ ಕೊಡಲಿ ಮತ್ತು ಬಡಿಗೆಗಳನ್ನು ಹಿಡಿದುಕೊಂಡು ಬಂದು ಮೋಟರ ಚಾಲು ಮಾಡಿದರೇ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ. ಜಗಳದ ಬಾಯಿ ಸಪ್ಪಳ ಕೇಳಿ ದಾರಿ ಹಿಡಿದು ಹೊರಟಿದ್ದ ರಂಗಪ್ಪ ಗೋವಿಂದಪ್ಪ ನ್ಯಾಮಗೌಡ ಮತ್ತು ಸೊಮನಿಂಗಪ್ಪ ಲಕ್ಷ್ಮಪ್ಪ ನಾಯ್ಕರ ಇವರು ಜಗಳ ಬಿಡಿಸಿದರು.

ಈ ಬಗ್ಗೆ ಪೊಲೀಸ ಠಾಣೆಗೆ ಹೋಗಿ ಪಿರ್ಯಾದಿ ದಾಖಲಿಸಿಕೊಳ್ಳುವಂತೆ ಕೇಳಿದ್ದರಿಂದ ಪೊಲೀಸರು ಸದರಿ ವ್ಯಾಜ್ಯ ಸಿವಿಲ್ ಸ್ವರೂಪದಾಗಿದೆ ಎಂದು ವಾಪಸ್ಸ ಕಳಿಸಿದ್ದರಿಂದ ನನ್ನ ತಂದೆ ಈ ಪ್ರಕರಣವನ್ನು ದಾಖಲಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ :**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ನ್ಯಾಯಾಧೀಶರು ವ ಜೆಎಂಎಫ್‌ಸಿ

ಮುಧೋಳ.

ಸಾಕ್ಷಿಯ ಸಹಿ

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ
ಸಿ.ಸಿ ನಂ-594/2015
ಚಾಸಾ-1 ಪ್ರಾಸಾ-1

| | |
|---|---|
| ಹೆಸರು | ಅರ್ಜುನ ಹನಮಪ್ಪ ಹಲಕಿ |
| ತಂದೆಯ ಹೆಸರು | ಹನಮಪ್ಪ ಹಲಕಿ |
| ವಯಸ್ಸು | 68 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸ ಸ್ಥಳ | ಲಕ್ಷಾನಟ್ಟಿ , ಮುಧೋಳ |

**ದಿನಾಂಕಃ 28-06-2023 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ- ಶ್ರಿ. ಎಮ್.ಬಿ.ಎಚ್. ಫಿರ್ಯಾದುದಾರರ ಪರ ವಕೀಲರು ಃ**

ಈ ಪ್ರಕರಣವನ್ನು ನಾನು ಬಸಪ್ಪ ಹನಮಪ್ಪ ಹಲಕಿ, ಅಜ್ಜಪ್ಪ ಬಸಪ್ಪ ಹಲಕಿ, ಲಕ್ಷ್ಮಪ್ಪ ಹನಮಪ್ಪ ಹಲಕಿ, ರವಿ ಲಕ್ಷ್ಮಪ್ಪ ಹಲಕಿ, ಮಂಜುನಾಥ ಲಕ್ಷ್ಮಪ್ಪ ಹಲಕಿ ಹಾಗೂ ಹನಮಪ್ಪ ಬಸಪ್ಪ ಹಲಕಿ ಇವರ ಮೇಲೆ ಹೂಡಿರುತ್ತೇನೆ.

ಆರೋಪಿ ನಂ.೨ ಮತ್ತು ೪ ಆರೋಪಿ ನಂ. ೧ ರ ಮಕ್ಕಳು. ಆರೋಪಿ ನಂ.೫ ಮತ್ತು ೬ ಮೃತ ಆರೋಪಿ ನಂ. ೩ ರ ಮಕ್ಕಳು. ಆರೋಪಿ ನಂ. ೧ ಮತ್ತು ೩ ನನ್ನ ಸಹೋದರರು.

ನನ್ನ ಮತ್ತು ಅಣ್ಣತಮ್ಮಂದಿರ ಮಧ್ಯ ಪಾಲು ವಾಟ್ನಿಗೆ ಸಂಬಂಧಿಸಿದಂತೆ ಜಮಖಂಡಿಯ ಹಿರಿಯ ಶ್ರೇಣಿ ಸಿವಿಲ ನ್ಯಾಯಾಲಯ ಮುಂದೆ ಅಸಲ ದಾವಾ ನಂ. 66/1999 ವ್ಯಾಜ್ಯ ಇತ್ತು ಅದು ಅಪಸಾತ ಪಾಲುವಾಟ್ನಿಯಲ್ಲಿ ಕೊನೆಗೊಂಡಿರುತ್ತದೆ. ಸದರಿ ಅಪಸಾತ ವಾಟ್ನಿ ಪ್ರಕಾರ ರಿ.ಸ.ನಂ. 163/1 ಎ ಕ್ಷೇತ್ರ 2 ಎಕರೆ 29 ಗುಂಟೆ ಲೋಕಾಪೂರನಲ್ಲಿದ್ದ ಜಮೀನು ನನ್ನ ಹಿಸ್ಸೆಗೆ ಬಂದಿರುತ್ತದೆ. ರಿ.ಸ.ನಂ. 163/1 ಬಿ ಕ್ಷೇತ್ರ 3 ಎಕರೆ 2 ಗುಂಟೆ ಲೋಕಾಪೂರನಲ್ಲಿದ್ದ ಜಮೀನು ಆರೋಪಿ ನಂ. ೧ ರ ಹಿಸ್ಸೆಗೆ ಹೋಗಿರುತ್ತದೆ. ರಿ.ಸ.ನಂ. 163/1 ಬಿ ಅಲ್ಲಿ ಬೋರವೆಲ್ ಇದ್ದು, ಆದರಿಂದ ನನಗೆ ಮತ್ತು ಆರೋಪಿ ನಂ. ೧ ಇವರಿಗೆ 1/3 ರಂತೆ ನೀರು ಹಾಯಿಸಿಕೊಳ್ಳಲಿಕ್ಕೆ ಹಕ್ಕು ಇರುತ್ತದೆ. ಸದರಿ ಬೋರವೆಲಿಗೆ ಸಂಬಂಧಿಸಿದ ಖರ್ಚುವೆಚ್ಚದಲ್ಲಿಯೂ ಸಹಿತ ಇಬ್ಬರಿಗೂ ಸಮಾನ ಹೊಣೆಗಾರಿಕೆ ಇರುತ್ತದೆ. ಸದರಿ ೨ ಜಮೀನಿಗೂ ಹಳ್ಳದಿಂದ ನೀರಿನ ಪೈಪಲೈನ ವ್ಯವಸ್ಥೆ ಇರುತ್ತದೆ. ನಮ್ಮ ಹೊಲ ಉತ್ತರ ಭಾಗಕ್ಕೆ ಇದೆ ಹಳ್ಳ ದಕ್ಷಿಣಕ್ಕೆ ಭಾಗಕ್ಕೆ ಇದೆ.

ಅಪಸಾತ ವಾಟ್ನಿ ಪ್ರಕಾರ ಆರೋಪಿ ನಂ. ೧ ನಡೆದುಕೊಳ್ಳದೇ ಇದ್ದಾಗ ಇದೇ ನ್ಯಾಯಾಲಯದ ಮುಂದೆ ಆರೋಪಿತರ ವಿರುದ್ಧ ಮನಾಯಿ ಆದೇಶ ಕೇಳಿ ಅಸಲ ದಾವಾ ನಂ. 316/2009 ನ್ನು ದಾಖಲಿಸಿದ್ದೆ. 2010 ಸೆಪ್ಟೆಂಬರ ತಿಂಗಳಲ್ಲಿ ರಿ.ಸ.ನಂ. 163/1 ಬಿ ನಲ್ಲಿದ್ದ ಮೋಟರನ್ನು ಚಾಲು ಮಾಡಲು ನಾನುಮತ್ತು ನನ್ನ ಮಕ್ಕಳು ಹೋದಾಗ ಆರೋಪಿತರೇಲ್ಲರೂ ತಮ್ಮ ಜಮೀನಿನಲ್ಲಿದ್ದರು ನಾವು ಮೋಟರ ಚಾಲು ಮಾಡುವಾಗ ಅವರೇಲ್ಲರೂ ಕೈಯಲ್ಲಿ ಕೊಡಲಿ ಮತ್ತು ಬಡಿಗೆಗಳನ್ನು ಹಿಡಿದುಕೊಂಡು ಮೋಟರ ಚಾಲು ಮಾಡಿದರೇ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಧಮಕಿ ಹಾಕಿರುತ್ತಾರೆ.

ದಾರಿ ಹೊರಟಿದ್ದ ರಂಗಪ್ಪ ಗೋವಿಂದಪ್ಪ ನ್ಯಾಮಗೌಡ ಮತ್ತು ಸೊಮನಿಂಗಪ್ಪ ಲಕ್ಷ್ಮಪ್ಪ ನಾಯ್ಕರ ಇವರು ಜಗಳದ ಬಾಯಿ ಸಪ್ಪಳ ಕೇಳಿ ಜಗಳ ಬಿಡಿಸಿದರು. ಜಗಳದ ನಂತರ ನಾನು ನನ್ನ ಮಕ್ಕಳೊಂದಿಗೆ ಲೋಕಾಪೂರ ಪೊಲೀಸ ಠಾಣೆಗೆ ಬಂದು ಫಿರ್ಯಾದಿ ದಾಖಲಿಸಿಕೊಳ್ಳುವಂತೆ ಹೇಳಿದ್ದರಿಂದ ಪೊಲೀಸರು ಈ ವ್ಯಾಜ್ಯ ದಿವಾಣಿ ಸ್ವರೂಪದ್ದಾಗಿದ್ದು, ಫಿರ್ಯಾದಿ ದಾಖಲಿಸಿಕೊಳ್ಳಲು ಬರುವುದಿಲ್ಲ ಎಂದು ಮರಳಿ ಕಳಿಸಿದರು. ನಂತರ ನ್ಯಾಯಾಲಯಕ್ಕೆ ಬಂದು ಖಾಸಗಿ ಫಿರ್ಯಾದಿಯನ್ನು

ದಾಖಲಿಸಿರುತ್ತೇನೆ. ಆರೋಪಿತರಿಂದ ನನಗೆ 60,000 ದಷ್ಟು ಹಾನಿ ಆಗಿರುತ್ತದೆ. ಸಾಕ್ಷಿಗೆ ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ-1 ರಿಂದ 16 ರನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

ಆದ್ದರಿಂದ ಆರೋಪಿತರಿಗೆ ಮಾನ್ಯ ನ್ಯಾಯಾಲಯ ಕಾನೂನಿನಡಿ ಶಿಕ್ಷಿಸಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ :**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ನ್ಯಾಯಾಧೀಶರು ವ ಜೆಎಂಎಫ್‌ಸಿ
ಮುಧೋಳ.

ಸಾಕ್ಷಿಯ ಸಹಿ